ಇಲ್ಲವೆಂದು ಪ್ರಾಮಾಣಿಕವಾಗಿ ಸ್ಪಷ್ಟವಾಗಿ ಹೇಳಿ ತಮಗೆ ಧನ್ಯವಾದಗಳನ್ನು ತಿಳಸಬಯಸುತ್ತೇನೆ.

ಗಮನ ಸೆಳೆಯುವ ಸೂಚನೆ

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯಲು ಪೋಲೀಸ್ ಇಲಾಖೆಯವರು ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ತೋರಿಸುತ್ತಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಡಾ:ಹೆಚ್.ಸಿ. ಮಹದೇವಪ್ಪ (ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ.)

ವಿಧಾನಸಭಾಸದಸ್ಯರಾದ ಮಾನ್ಯ ಶ್ರೀ ಶ್ರೀರಾಮರೆಡ್ಡಿಯವರು ನಿಯಮ 73ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ

ಮಾನ್ಯ ಸದಸ್ಯರು ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ, ಮಾನಭಂಗ, ಮತ್ತು ದೌರ್ಜನ್ಯ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ಇವರ ಮಾನ ಮತ್ತುಪ್ರಾಣ ರಕ್ಷಣೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಕುರಿತು ಪ್ರಸ್ತಾ ಸಿದ್ದಾರೆ.

ಮಾನ್ಯ ಸದಸ್ಯರ ಕಳಕಳಿಯನ್ನು ಮತ್ತು ವಿಚಾರದ ಗಂಭೀರತೆಯನ್ನು ಸರ್ಕಾರ ಮನಗಂಡಿದೆ.

ಮಹಿಳೆಯರ ಅತ್ಯಾಚಾರ, ಮಾನಭಂಗ ಮತ್ತು ದೌರ್ಜನ್ಯ ಇತ್ಯಾದಿ ಪ್ರಕರಣಗಳ ವಿವರ ಹೀಗಿದೆ.

2002ರಲ್ಲಿ	6,989 ಪ್ರಕರಣಗಳು
2003ರಲ್ಲಿ	6,558 ಪ್ರಕರಣಗಳು
2004ರಲ್ಲಿ	6,442 ಪ್ರಕರಣಗಳು
2005 ಮೇ ಮಾಹೆಯ ಅಂತ್ಯದವರೆಗೆ	3,092 ಪ್ರಕರಣಗಳು

ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆ

ಗಳು ಆಗುತ್ತಿರುವ ಹಿನ್ನೆಲೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಮತ್ತು ಮಹಿಳೆಯರ ರಕ್ಷಣೆಗೆ ಸರ್ಕಾರ ಕಟಿಬದ್ಧವಾಗಿದೆ.

ಈ ಬಗ್ಗೆ ತೆಗೆದುಕೊಂಡ ಕ್ರಮಗಳು :

1. ರಾಜ್ಯದಲ್ಲಿರುವ ಮಹಿಳಾ ಆಯೋಗ ಮತ್ತು ರಾಷ್ಟ್ರ ಮಟ್ಟದ ಮಹಿಳಾ ಆಯೋಗದವರು ಕಾಲಕಾಲಕ್ಕೆ ಕೊಡುವ ಸೂಚನೆ ಮತ್ತು ಸಲಹೆ ಗಳನ್ನು ಇಲಾಖೆ ಅತ್ಯಂತ ಗಂಭೀರವಾಗಿ ತೆಗೆದುಕೊಂಡು ಕಾರ್ಯಗತಗೊಳಿಸುತ್ತಿದೆ.

2. ಸರ್ಕಾರ ಒಂದೇ ಅಲ್ಲದೇ ಸಾರ್ವಜನಿಕ ಮಹಿಳಾ ಹಿತಾಸಕ್ತಿ (NGO) ಸಂಸ್ಥೆಗಳೊಂದಿಗೆ ಸತತ ಸಂಪರ್ಕವನ್ನಿಟ್ಟುಕೊಂಡು ಅವರ ಸಹಯೋಗದೊಂದಿಗೆ ಮಹಿಳೆಯರ ಸಮಸ್ಯೆಗಳಿಗೆ ಸಕಾಲದಲ್ಲಿ ಸ್ಪಂದಿಸಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮಹಿಳೆಯರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ವನಿತಾ ಸಹಾಯ ವಾಣಿ ಕೇಂದ್ರವನ್ನು ತೆರೆಯಲಾಗಿದೆ.

3. ಈ ವಿಚಾರದಲ್ಲಿ ಅತ್ಯಂತ ಎಚ್ಚರಿಕೆ ವಹಿಸಲು ಎಲ್ಲಾ ಪೋಲೀಸ್ ಠಾಣೆಗಳಲ್ಲೂ ಅಗತ್ಯ ಸುತ್ತೋಲೆಗಳನ್ನು ಹೊರಡಿಸಿ, ಅನುಷ್ಠಾನ ವಾಗುವಂತೆ ಮೇಲಿನ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದೆ.

4. ರಾಜ್ಯದಲ್ಲಿ ಹತ್ತು ಪ್ರತ್ಯೇಕ ಮಹಿಳಾ ಪೋಲೀಸ್ ಠಾಣೆಗಳನ್ನು ಸ್ಥಾ ಪಿಸಲಾಗಿದೆ. ಬೆಂಗಳೂರಿನಲ್ಲಿ 2, ಮೈಸೂರು, ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ, ಬೆಳಗಾಂ ದಕ್ಷಿಣ ಕನ್ನಡ, ಶಿವಮೊಗ್ಗ, ದಾವಣಗೆರೆ ಮತ್ತು ಉಡು ಯಲ್ಲೂ ತಲಾ ಒಂದೊಂದು ಪೊಲೀಸ್ ಠಾಣೆ ಮಹಿಳೆಯರಿ ಗಾಗಿಯೇ ಪ್ರತ್ಯೇಕವಾಗಿವೆ. ಈ ಠಾಣೆಗಳಿಗೆ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಒಬ್ಬ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಅಗತ್ಯ ಮಹಿಳಾ ಸಿಬ್ಬಂದಿಯನ್ನು ಒದಗಿಸಲಾಗಿದೆ.

5. ಸಾರ್ವಜನಿಕ ಜಾಗೃತಿಗಾಗಿ, ಆಗಿಂದಾಗ್ಗೆ ಜನಸಂಪರ್ಕ ಸಭೆ ಗಳನ್ನೇರ್ಪಡಿಸಿ, ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಸುರಕ್ಷತೆ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

6. ರಾಜ್ಯದಲ್ಲಿ ಸೂಕ್ಷ್ಮ ಸ್ಥಳಗಳೆಂದು ಗುರುತಿಸಲಾದ ಠಾಣೆಗಳಲ್ಲಿ

ಪ್ರತ್ಯೇಕವಾದ ಮಹಿಳಾ ಡೆಸ್ಕ್ ಅನ್ನು ತೆರೆದು ಮಹಿಳಾ ಸಿಬ್ಬಂದಿಯನ್ನೇ ಕರ್ತವ್ಯಕ್ಕೆ ನೇಮಿಸಲಾಗಿದೆ.

7. ಮಹಿಳೆಯರ ಮೇಲಿನ ಗಂಭೀರವಾದ ಅಪರಾಧಗಳಾದ ಅತ್ಯಾಚಾರ, ವರದಕ್ಷಿಣೆ ಕಿರುಕುಳ ಸಾವು ಮತ್ತು ಕೊಲೆಗಳಂತಹ ಪ್ರಕರಣಗಳನ್ನು ವಿಶೇಷವಾಗಿ ಗಮನಿಸಿ, ಇಂತಹ ಅಪರಾಧಗಳ ತನಿಖೆಯನ್ನು ಡಿ.ಎಸ್. ಮತ್ತು ಎ.ಸಿ. . ದರ್ಜೆಯ ಹಿರಿಯ ಅಧಿಕಾರಿಗಳಿಗೆ ವಹಿಸಲಾಗುತ್ತಿದೆ.

8. ವರದಕ್ಷಿಣೆ ಸಾವಿನಂತಹ ಪ್ರಕರಣಗಳನ್ನು (COD) ಘಟಕದಿಂದಲೇ ತನಿಖೆ ನಡೆಸಲಾಗುತ್ತಿದೆ.

9. ಆಸಿಡ್ ಎರಚುವಿಕೆ ಮತ್ತು ವರದಕ್ಷಿಣೆ ನಿಷೇಧ ಕಾಯಿದೆಯಡಿ ದಾಖಲಾದಂಥ ಪ್ರಕರಣಗಳನ್ನು ಘೋರ ಅಪರಾಧವೆಂದು ಪರಿಗಣಿಸಿ ತನಿಖೆ ನಡೆಸಲಾಗುತ್ತಿದೆ.

10. ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯ ಶ್ರೇಷ್ಠ ನ್ಯಾಯಾಲಯಗಳೂ ಕಾಲದಿಂದ ಕಾಲಕ್ಕೆ ನೀಡುವ ಸಲಹೆ ಮತ್ತು ಸೂಚನೆಗಳನ್ನು ಪಾಲಿಸಲಾಗುತ್ತಿದೆ.

11. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದಲೂ ನೊಂದ ಹೆಣ್ಣು ಮಕ್ಕಳಿಗೆ Counselling ಸಹ ಏರ್ಪಡಿಸಲಾಗಿದೆ.

12. ಸಮಾಜದಲ್ಲಿ ಬದಲಾಗುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳ ಪರಿಣಾಮದಿಂದಲೂ ಈ ಸಂಬಂಧದ ಅಪರಾಧಗಳಿಗೆ ಕಾರಣವಾಗಿದ್ದು ಸಾರ್ವಜನಿಕ ಜಾಗೃತಿ ಮೂಡಿಸಲು ಮಹಿಳಾ ಸಂಘಟನೆಗಳೊಂದಿಗೆ ಸಂಪರ್ಕವಿಟ್ಟುಕೊಂಡು ಅವರ ಸಹಯೋಗ ಮತ್ತು ಸಹಕಾರದಿಂದ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಪೋಲೀಸ್ ಇಲಾಖೆಗೆ ಸೂಕ್ತ ಆದೇಶ ನೀಡಲಾಗಿದೆ.

13 ಗಮನ ಸೆಳೆಯುವ ಸೂಚನೆ (ಮುಂದು) ಪೊಲೀಸ್ ಇಲಾಖೆಗೆ ಸೂಕ್ತ ಆದೇಶ ನೀಡಲಾಗಿದೆ

ಶೀ ಜೆ. ವಿ. ಶ್ರೀರಾಮರೆಡ್ಡಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಟ್ಟಿದ್ದಾರೆ. 2002ರಿಂದ ಏನೇನು ಘಟನೆಗಳು ನಡೆದಿವೆ ಎಂದು ಕೊಟ್ಟಿದ್ದು, ಈ ಅಂಕಿ ಅಂಶಗಳನ್ನು ಮೊಟ್ಟಮೊದಲನೆಯದಾಗಿ ನಾನು ಒಪ್ಪುವುದಕ್ಕೆ ತಯಾರಿಲ್ಲ. ಇದನ್ನು ಅಲ್ಲಗಳೆಯುತ್ತೇನೆ. ಏಕೆಂದರೆ ಈ ಅಂಕಿಸಂಖ್ಯೆಗಳು ಏನು ಕೊಟ್ಟಿದ್ದಾರೆ. ಇದು ಸಂಪೂರ್ಣವಾಗಿ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಈ ಅಂಕಿಅಂಶಗಳು ಹೇಗೆ ತಪ್ಪು ಎಂದು ನಾನು ಹಿಂದೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಂಡ್ಯ ಜಿಲ್ಲೆಯ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಈ ವರ್ಷದಲ್ಲಿ 24 ಹಲ್ಲೆ ಮತ್ತು ಮಾನಭಂಗ ಅತ್ಯಾಚಾರ ಪ್ರಕರಣಗಳು ನಡೆದಿವೆ. ನನ್ನ ಹತ್ತಿರ ಪಟ್ಟಿ ಇದೆ. ನಾಗಮಂಗಲ, ಪಾಂಡವಪುರ, ನಾಗಮಂಗಲ, ಶ್ರೀರಂಗಪಟ್ಟಣ, ಶ್ರೀರಂಗಪಟ್ಟಣ ಮತ್ತು ಮಂಡ್ಯ. 2005ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಇಂತಹ ಒಂದು ಘಟನೆ ನಡೆದಿದ್ದರೆ ಇನ್ನು 27 ಜಿಲ್ಲೆಗಳಲ್ಲಿ ಎಷ್ಟು ಘಟನೆ ನಡೆದಿರಬಹುದು. ಇದೊಂದು ಉದಾಹರಣೆಯಾದರೆ, ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು 17 ಪ್ರಕರಣಗಳು ನಡೆದಿವೆ. ಅದರಲ್ಲಿ ಅತ್ಯಂತ ಹೀನವಾದಂತಹ ಘಟನೆ, ಹೊಸಕೆರೆಹಳ್ಳಿಯಲ್ಲಿ ನಡೆದಂತಹ ಉತ್ತರ ಕನ್ನಡದಿಂದ ಕೃಷಿ ಕಾರ್ಮಿಕಳಾಗಿ ಈ ಕಡೆಗೆ ಬಂದಂತಹ ಹೆಣ್ಣುಮಗಳು ಬಸ್‌ಸ್ಟಾಪ್‌ನಲ್ಲೆ ನಿಂತಿದ್ದಾಗ ನಾಲ್ಕು ಜನ ದುಷ್ಕರ್ಮಿಗಳು ಅವಳನ್ನು ಎತ್ತಿಕೊಂಡು ಹೋಗಿ ಅತ್ಯಾಚಾರವನ್ನು ಮಾಡಿ, ನಂತರ ಅವರು ಬಹಿರಂಗವಾಗಿ ಸ್ಟೇಷನ್‌ನಲ್ಲಿ ಹೇಳಿಕೆಯನ್ನು ಕೊಡುತ್ತಾರೆ. ಅದೇನೆಂದರೆ ಆ ಸಮಯ ಅತ್ಯಾಚಾರ ಮಾಡುವುದೆ ತಮ್ಮ ಪ್ರಮುಖ ಉದ್ದೇಶವಾಗಿತ್ತು ಎಂದು ಬಂಧಿತರು ಪೋಲೀಸರಿಗೆ ತಿಳಿಸುತ್ತಾರೆ. ಈ ರೀತಿಯಾಗಿ ನೇರವಾಗಿ ಅವರೇ ಹೇಳುತ್ತಾರೆ. ಆದರೆ ನೀವು ಇಲ್ಲಿ ಹೇಳಿಕೆಯನ್ನು ಕೊಡುವಾಗ ಏನು ಹೇಳಿದ್ದೀರಿ ಎಂದರೆ ಪೋಲೀಸ್ ಠಾಣೆಗಳನ್ನು ನಾವು ಪ್ರಾರಂಭ ಮಾಡಿದ್ದೇನೆ. ಪೋಲೀಸರೆ ಹೆಚ್ಚಿನ ಜವಾಬ್ದಾರಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಹೆಚ್ಚಿನ ಸಂದರ್ಭಗಳಲ್ಲೆ ಇವತ್ತು ಮಹಿಳೆಯರ ಮೇಲೆ ದಬ್ಬಾಳಿಕೆ ಅತ್ಯಾಚಾರ ನಡೆದಂತಹ ಸಂದರ್ಭದಲ್ಲಿ ಪೋಲೀಸನವರೆ ಇದನ್ನು ಸಂಪೂರ್ಣವಾಗಿ ದಾರಿತ ಪ್ಪಿಸುವುದು, ಅಪರಾಧಿಗಳನ್ನು ರಕ್ಷಣೆ ಮಾಡುವುದು. ಕಂಪ್ಲೇಂಟು ಕೊಡುವುದಕ್ಕೆ ಹೋದರೆ ಆ ಹೆಣ್ಣು ಮಗಳನ್ನು ಇಲ್ಲಸಲ್ಲದೆ ಪ್ರಶ್ನೆಗಳನ್ನು ಕೇಳುವುದು, ಇಂತಹ

ಕಾರಣಗಳಿಂದ ನೂರಾರು ಜನ ಹೆಣ್ಣು ಮಕ್ಕಳು ಪೋಲೀಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋಗುವುದಿಲ್ಲ. ಮಹಿಳೆಯರು ತಮ್ಮ ಮೇಲೆ ದಬ್ಬಾಳಿಕೆ ನಡೆದಾಗಲೂ ಕೂಡ ಪೋಲೀಸ್ ಸ್ಟೇಷನ್‌ಗೆ ಹೋಗುವುದಿಲ್ಲ. ಏಕೆಂದರೆ ಇವರು ಕೇಳುವಂತಹ ಅಸಂಬದ್ಧವಾದಂತಹ ಪ್ರಶ್ನೆಗಳು ಎನಿರುತ್ತವೆ ಆ ಹೆಣ್ಣುಮಗಳಿಗೆ, ಅದಕ್ಕೆ ಯಾವ ಸಭ್ಯತೆ ಇರುವ ಹೆಣ್ಣುಮಗಳು ಕೂಡ ಪೋಲೀಸ್ ಸ್ಟೇಷನ್‌ನಲ್ಲೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಆ ರೀತಿಯಾಗಿ ನಿಮ್ಮ ಪೋಲೀಸಿನವರು ವರ್ತನೆ ಮಾಡುತ್ತಾರೆ. ಮೊನ್ನೆ ನಾನು ಶಿಡ್ಲಘಟ್ಟದ ವಿಚಾರ ಇಲ್ಲೆ ಪ್ರಸ್ತಾಪ ಮಾಡಿದೆ. ಅಲ್ಲೆ 14 ವರ್ಷದ ಹೈಸ್ಕೂಲ್ ವಿದ್ಯಾರ್ಥಿಯಿನ ಮಾನಭಂಗದ ವಿಚಾರದಲ್ಲೆ ಪೋಲೀಸವರೆ ಉದ್ದೇಶಪೂರ್ವಕವಾಗಿ ಅಪರಾಧಿಗಳನ್ನು ತ ್ಪಸಿದರು.

ಶ್ರೀ ಕೆ. ಆರ್. ರಮೇಶ್ ಕುಮಾರ (ಶ್ರೀನಿವಾಸಪುರ):– ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಬಹಳ ಮುಖ್ಯವಾದುದು. ಇದನ್ನು ಗಮನ ಸೆಳೆಯುವ ಸೂಚನೆ ರೂಪದಲ್ಲೆ ತೆಗೆದುಕೊಳ್ಳುವುದು ಬೇಡ. ಗಮನ ಸೆಳೆಯುವ ಸೂಚನೆ ಎಂದರೆ ಮಾನ್ಯ ಸದಸ್ಯರು ಗಮನ ಸೆಳೆಯುತ್ತಾರೆ. ಆಗ ಸರ್ಕಾರದ ಒಂದು ಹೇಳಿಕೆ ಮಾಡಬೇಕಾಗುತ್ತದೆ. ಒಂದೆರಡು ಕ್ಲಾರಿ , ಕೇಷನ್ ಕೇಳಬೇಕೆ ಹೊರತು ಡಿಬೇಟಿಗೆ ಅವಕಾಶ ಇರುವುದಿಲ್ಲ. ನಾವು ಸೀನಿಯರ್ ಮೆಂಬರ್ should not deviate from the proceedings. This matter is very serious. ತಾವು ಶೀಘ್ರವಾಗಿ ಬೇರೆ ರೂಪದಲ್ಲಿ ಇದನ್ನು ತಂದರೆ ವಿಸ್ತೃತ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿದರೆ that would be better.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :– ಮಾನ್ಯ ಉಪಾಧ್ಯಕ್ಷರೆ, ರೂಲ್ 69ರಲ್ಲಿ ಕನ್‌ವರ್ಟ್ ಮಾಡಿಕೊಡಿ. ಬಹಳ ಜನ ಮಾತನಾಡುವುದಕ್ಕೆ ಇದೆ. ಈಗ ಗಮನ ಸೆಳೆಯುವ ಸೂಚನೆ ತಂದಿದ್ದು, ಎಲ್ಲಾ ಮಾತನಾಡುವುದಕ್ಕೆ ಇದೆ. ಇದನ್ನು ರೂಲ್ 69ಗೆ ಕನ್‌ವರ್ಟ್ ಮಾಡಿದರೆ ಇದರ ವಿಚಾರದಲ್ಲಿ ಇಂಟರಿಸ್ಟ್ ಇರುವವರೆಲ್ಲ ರೂ ಕೂಡ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ತಾವು ಇದನ್ನು ರೂಲ್ 69ರ ಕೆಳಗಡೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ಹೇಳಿ.

ಶ್ರೀಮತಿ ಎಂ.ಕೆ. ನಾಗಮಣಿ(ಕಿರುಗಾವಲು):– ಮಾನ್ಯ ಉಪಾಧ್ಯಕ್ಷರೆ, ದಿನನಿತ್ಯ ಮಹಿಳೆಯರ ಮೇಲೆ ದೌರ್ಜನ್ಯ ಹಾಗೂ ಅತ್ಯಾಚಾರಗಳು ನಡೆಯುತ್ತಿವೆ. ಇದರ ಬಗ್ಗೆ ಚರ್ಚೆ ಮಾಡಬೇಕಾದರೆ ಯಾವುದಾದರೂ ಒಂದು ನಿಯಮದ ಅಡಿಯಲ್ಲೆ ಒಂದರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಿಜವಾಗಲೂ ಇದರ ಬಗ್ಗೆ ಚರ್ಚೆ ಮಾಡಿ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ಅತ್ಯಾಚಾರ ವಿಷಯದಲ್ಲೆ ಸರ್ಕಾರಕ್ಕೆ ಕಾಳಜಿ ಇದೆಯೇ? ಯಾವ ರೀತಿ ಬಗೆಹರಿಸುತ್ತದೆ ಎಂದು ತಿಳಿದುಕೊಳ್ಳಬೇಕಾಗಿದೆ.

ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು):– ಮಾನ್ಯ ಉಪಾಧ್ಯಕ್ಷರೆ, 31/2 ವರ್ಷದ 22 ಸಾವಿರ ಕೇಸುಗಳು ದಾಖಲಾಗಿವೆ. ಶಿಡ್ಲಘಟ್ಟದ್ದು ಎಲ್ಲಾ ಸಾರ್ವಜನಿಕರ ಗಲಾಟೆಯಾದ ಮೇಲೆ ದಾಖಲೆ ಯಾಯಿತು ಎಂದರೆ ದಾಖಲಾಗದ ಕೇಸುಗಳು ಅಷ್ಟೇ ಸಾವಿರ ಇರಬಹುದು. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ಇದು ಚರ್ಚೆಯಾಗಬೇಕೆಂದು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು:– ಮಾನ್ಯ ಮಂತ್ರಿಗಳು ಇದಕ್ಕೆ ರಿಪ್ಲೈ ಕೊಡುತ್ತೀರಾ?

ಡಾ:ಹೆಚ್.ಸಿ. ಮಹದೇವಪ್ಪ:– ಮಾನ್ಯ ಉಪಾಧ್ಯಕ್ಷರೆ, ಇದು ಸೂಕ್ಷ್ಮ ಮತ್ತು ಬಹಳ ಪ್ರಮುಖವಾದ ಸಂಗತಿಯಾಗಿರುವುದರಿಂದ ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಸರ್ಕಾರ ಕೂಡ ಅದಕ್ಕೆ ಉತ್ತರ ಕೊಡುವುದಕ್ಕೆ ಸಿದ್ಧವಿದೆ. ಹಾಗೂ ಪರಿಹಾರ ಕಂಡುಕೊಳ್ಳುವುದಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡೋಣ.

ಶ್ರೀಮತಿ ಎಂ.ಕೆ. ನಾಗಮಣಿ:– ಮಾನ್ಯ ಅಧ್ಯಕ್ಷರೆ, ಯಾವಾಗ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ ಎಂದು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು:– ನಾಳೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ತಾವು ಕಾಲ ನಿಗದಿ ಮಾಡಿ ನಿಯಮ 69ರ ಪ್ರಕಾರ ಚರ್ಚೆಗೆ ಅವಕಾಶ ಕೊಡಿ. ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು:– ನಾಳೆ ಮಧ್ಯಾಹ್ನ 4 ಗಂಟೆಗೆ ಅವಕಾಶ ಕೊಡುತ್ತೇನೆ.

ವಿಷಯ: ಸಂವಿಧಾನಬದ್ಧವಲ್ಲದ ಜಿಲ್ಲಾ ಉಸ್ತುವಾರಿ ಸಚಿವರ ನೇಮಕದಿಂದ ಚುನಾಯಿತ ಶಾಸನ ಸಭೆಯ ಸದಸ್ಯರು ಸಮರ್ಪಕವಾಗಿ